# 2021-22 ನೇ ಸಾಲಿನ ಸೇತುಬಂಧ ಕಾರ್ಯಕ್ರಮ

**ತರಗತಿ :** 4 30 ದಿನಗಳ ಕಲಿವಿನ ಚಟುವಟಿಕೆಗಳು **ವಿಷಯ :**ಪರಿಸರ

ಅಧ್ಯಯನ

| ಕ್ರ. ಸಂ. | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 1 | ಕುಟುಂಬದ ಅಗತ್ಯತೆ, ಸಂಬಂಧಗಳು, ಮೌಲ್ಯಗಳು ಮತ್ತು ವೈವಿಧ್ಯತೆಯನ್ನು ಅರಿಯುವರು. | ಅ) ಮನೆಯೊಳಗಿನ ರಕ್ತ ಸಂಬಂಧಿಗಳ ಸಮೂಹವೇ ಕುಟುಂಬವೆಂದು ತಿಳಿಯುವರು. | **ದಿನ – 1**<br>i) 'ನನ್ನ ಪ್ರೀತಿಯ ಕುಟುಂಬ' (ಕುಟುಂಬದ ಭಾವಚಿತ್ರ ಪ್ರದರ್ಶನ) | ಮಕ್ಕಳು ತಮ್ಮ ಕುಟುಂಬದ ಭಾವಚಿತ್ರದಲ್ಲಿರುವ ವ್ಯಕ್ತಿಗಳ ಸಂಬಂಧಗಳನ್ನು ತರಗತಿಯಲ್ಲಿ ಹೇಳುತ್ತಾ, ಶಿಕ್ಷಕರ ಸಹಾಯದಿಂದ ಕುಟುಂಬದ ಅರ್ಥವನ್ನು ತಿಳಿಯುವರು. |
| | | | ii) ' ಪ್ರಶ್ನಾವಳಿ' (ಸಂಬಂಧಗಳ ಮೇಲಿನ ಪ್ರಶ್ನೆಯಿರುವ ಮಿಂಚುಪಟ್ಟಿ) | ಮಕ್ಕಳು, ಮಿಂಚುಪಟ್ಟಿಗಳಲ್ಲಿರುವ ಸಂಬಂಧಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ, ವಿವಿಧ ಸಂಬಂಧಗಳನ್ನು ಅರಿಯುವರು/ಕುಟುಂಬ ಸದಸ್ಯರ ನಡುವಿನ ಸಂಭಾಷಣೆ ಕುರಿತು ಕಿರುನಾಟಕ<br>( ಉದಾ: ನಿನ್ನ ತಂದೆಯತಂಗಿನಿನಗೆ ಏನಾಗಬೇಕು?) |
| | | ಆ) ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳಿಗಿರುವ ವ್ಯತ್ಯಾಸ ತಿಳಿಯುವರು. | **ದಿನ –2**<br>i) 'ಕುಟುಂಬದ ವಿಧಗಳು' (ಚಿತ್ರಪ್ರದರ್ಶನ) | ಬೇರೆ ಬೇರೆ ಕುಟುಂಬಗಳ ಚಿತ್ರಗಳನ್ನುನೋಡಿ, ಅದರಲ್ಲಿರುವ ಸದಸ್ಯರ ಸಂಖ್ಯೆಗನುಗುಣವಾಗಿ ಕುಟುಂಬದ ಎರಡು ವಿಧಗಳಾದ ವಿಭಕ್ತ ಮತ್ತುಅವಿಭಕ್ತ ಕುಟುಂಬಗಳ ಬಗ್ಗೆ ಶಿಕ್ಷಕರ ಸಹಾಯದಿಂದ , ವಿಭಕ್ತ & ಅವಿಭಕ್ತ ಕುಟುಂಬಗಳ ನಡುವಿನ ವ್ಯತ್ಯಾಸ ತಿಳಿಯುವರು. |
| | | | ii) 'ನನ್ನ ಕುಟುಂಬದ ವಿಧ' (ಮೌಖಿಕ ಅಭಿವ್ಯಕ್ತಿ) | ಪ್ರತೀ ಮಗುವು ತನ್ನ ಕುಟುಂಬವು ವಿಭಕ್ತವೋ ಅಥವಾ ಅವಿಭಕ್ತವೋ ಎಂದು ತನ್ನ ಸ್ನೇಹಿತರು ಹಾಗೂ ಶಿಕ್ಷಕರೊಂದಿಗೆ ಹಂಚಿಕೊಳ್ಳುವುದು. |
| | | ಇ) ಕುಟುಂಬದಿಂದಒಳ್ಳೆಯ | **ದಿನ –3** | ಮಗು, ತನ್ನ ಬಿಡುವಿನ ವೇಳೆಯಲ್ಲಿ ಕುಟುಂಬದ ಸದಸ್ಯರಿಗೆ ಹೇಗೆ |

| | | | | |
|---|---|---|---|---|
| | | ಮೌಲ್ಯಗಳನ್ನುಕಲಿಯುವರು | i) 'ನಾನೂ ಸಹಾಯ ಮಾಡುವೆ!' (ಮೌಖಿಕ ಚಟುವಟಿಕೆ) | ಸಹಕರಿಸುತ್ತದೆಎಂದು ತರಗತಿಯಲ್ಲಿ ಹೆಮ್ಮೆಯಿಂದ ಹಂಚಿಕೊಳ್ಳುತ್ತದೆ. ಮಗುವಿನ ಈ ಕಾರ್ಯವನ್ನು ಶಿಕ್ಷಕರು ಪ್ರಶಂಸಿಸಿ ಉತ್ತೇಜಿಸುವರು. |
| | | | ii) ಕುಟುಂಬದಿಂದ ಕಲಿಯುವ ಮೌಲ್ಯಗಳಿಗೆ ಸಂಬಂಧಿಸಿದ ನಾಟಕಾಭಿನಯ | ಕುಟುಂಬದಿಂದ ಕಲಿಯುವ ಒಳ್ಳೆಯ ಗುಣಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಸ್ವರಚಿತ ನಾಟಕವನ್ನು ಮಕ್ಕಳಿಂದ ಮಾಡಿಸಿ, ಆ ನಾಟಕದ ವಿವಿಧ ಸನ್ನಿವೇಶಗಳಲ್ಲಿ ಬರುವ ಮೌಲ್ಯಗಳನ್ನು ತಿಳಿದು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಉತ್ತೇಜಿಸುವುದು. |
| 2 | ಒಳಾಂಗಣ ಹಾಗೂ ಹೊರಾಂಗಣ ಆಟಗಳನ್ನು ಗುರುತಿಸುವರು ಮತ್ತು ಆಟಗಳನ್ನು ಕಲಿತು ಅವುಗಳ ಪ್ರಯೋಜನಗಳನ್ನು ತಿಳಿಯುವರು | ಅ) ಒಳಾಂಗಣ ಮತ್ತು ಹೊರಾಂಗಣ ಆಟಗಳನ್ನು ತಿಳಿಯುವರು. | **ದಿನ –4** i) 'ಹೊಂದಿಸು' (ಗುಂಪು ಚಟುವಟಿಕೆ) | ಅಭ್ಯಾಸ ಹಾಳೆಯಲ್ಲಿರುವ ಆಟಗಳ ಚಿತ್ರಗಳನ್ನು ಅವುಗಳ ಹೆಸರುಗಳೊಂದಿಗೆ ಹೊಂದಿಸಲು ಹುರಿದುಂಬಿಸೋಣ. |
| | | | ii) 'ಆಡು ಆಟ ಆಡು' (ಆಟ ಆಡುವರು) | ಒಳಾಂಗಣ ಆಟಗಳಾದ ಕೇರಂ, ಚೌಕಾಬಾರ ಹಾಗೂ ಹೊರಾಂಗಣ ಆಟಗಳಾದ ಕಬಡ್ಡಿ, ಲಗೋರಿ ಇತ್ಯಾದಿ ಆಟಗಳನ್ನು ಆಡಿ ಆನಂದಿಸುವರು. ಕೆಲವು ಒಳಾಂಗಣ ಮತ್ತು ಹೊರಾಂಗಣ ಆಟಗಳ ಪಟ್ಟಿ ಮಾಡುವರು. |
| | | ಆ) ಆಟಗಳ ಪ್ರಯೋಜನಗಳನ್ನು ತಿಳಿದುಕೊಳ್ಳುವರು. | **ದಿನ –5** i) ಆಟದಿಂದ ಆರೋಗ್ಯ ( ಚರ್ಚೆ ) | ತರಗತಿಯಲ್ಲಿ, ಮಕ್ಕಳು ಹಾಗೂ ಶಿಕ್ಷಕರು ಆಟಗಳಿಂದಾಗುವ ಅನುಕೂಲಗಳ ಬಗ್ಗೆ ಚರ್ಚಿಸುವರು. |
| | | | ii) ಮಿಂಚುಪಟ್ಟಿಗಳ ಪ್ರದರ್ಶನ | ಆಟಗಳಪ್ರಯೋಜನಗಳಿಗೆ ಸಂಬಂಧಪಟ್ಟ ಮಿಂಚುಪಟ್ಟಿಗಳಲ್ಲಿರುವ ವಾಕ್ಯಗಳನ್ನು ಓದುತ್ತಾ ಆಟಗಳ ಪ್ರಾಮುಖ್ಯತೆಯನ್ನು ಅರಿಯುವರು. |

| | | | | |
|---|---|---|---|---|
| 3 | ಸಸ್ಯಗಳ ಭಾಗಗಳು ಮತ್ತು ವಿಧಗಳನ್ನು ಗುರುತಿಸುವರು ಹಾಗೂ ಸಸ್ಯಗಳ ಮೇಲಿನ ನಮ್ಮ ಅವಲಂಬನೆಯನ್ನು ವಿವರಿಸುವರು | ಅ) ಸಸ್ಯಗಳ ವಿಧಗಳನ್ನು ಗುರುತಿಸುವರು. | **ದಿನ –6**<br>i) 'ನಮ್ಮ ಶಾಲೆಯ ಸುತ್ತ ಮುತ್ತ'<br>( ಸಸ್ಯಗಳ ವೀಕ್ಷಣೆ ) | ಶಿಕ್ಷಕರು ಮತ್ತು ಮಕ್ಕಳು ಶಾಲಾ ಪರಿಸರದಲ್ಲಿ ಸಂಚರಿಸಿ, ವಿವಿಧ ರೀತಿಯ ಸಸ್ಯಗಳನ್ನು ವೀಕ್ಷಿಸಿ, ಅವುಗಳಲ್ಲಿ ಮೂಲಿಕೆಗಳು, ಪೊದರುಗಳು, ಬಳ್ಳಿಗಳು ಮತ್ತು ಮರಗಳನ್ನು ಪರಿಚಯಿಸಿಕೊಂಡು ಅವುಗಳನ್ನು ಹೆಸರಿಸುವರು. |
| | | | ii)ವಿಡಿಯೋವೀಕ್ಷಣೆ | ಮಕ್ಕಳು, ವಿವಿಧರೀತಿಯಸಸ್ಯಗಳವಿಡಿಯೋವನ್ನು ವೀಕ್ಷಿಸಿ ಸಸ್ಯಗಳ ವಿಧಗಳನ್ನು ಗುರುತಿಸುವರು. |
| | | ಆ) ಸಸ್ಯದ ಭಾಗಗಳನ್ನು ಗುರುತಿಸುವರು. | **ದಿನ –7**<br>i) ಪ್ರಾತ್ಯಕ್ಷಿಕೆ | ಮಕ್ಕಳು, ನೈಜ ಸಸ್ಯಗಳನ್ನು ವೀಕ್ಷಿಸಿ, ಸಸ್ಯದ ಭಾಗಗಳನ್ನು ಗುರುತಿಸುವರು. |
| | | | ii) 'ಬರೆವೆ ನಾನು ಚಿತ್ರ'<br>(ಸಸ್ಯದ ಚಿತ್ರ ರಚನೆ ) | ಮಕ್ಕಳು ಸಸ್ಯದ ಅಂದವಾದ ಚಿತ್ರವನ್ನು ಬಿಡಿಸಿ, ಭಾಗಗಳನ್ನು ಗುರುತಿಸಿ ಬಣ್ಣವನ್ನು ಹಚ್ಚಲು ಶಿಕ್ಷಕರು ಅನುಕೂಲಿಸುವುದು. ನಂತರ ಮಕ್ಕಳು ತರಗತಿಯಲ್ಲಿ ತಮ್ಮ ತಮ್ಮ ಚಿತ್ರಗಳನ್ನು ಪ್ರದರ್ಶಿಸಿ ಆನಂದಿಸುವರು. |
| | | ಇ) ದೈನಂದಿನ ಅವಶ್ಯಕತೆಗಳಿಗಾಗಿ ನಾವು ಸಸ್ಯಗಳನ್ನು ಅವಲಂಬಿಸಿದ್ದೇವೆ ಎಂದು ತಿಳಿಯುವರು. | **ದಿನ –8**<br>i) 'ಸಸ್ಯದಿಂದ ಆಹಾರ'<br>(ಗುಂಪು ಚಟುವಟಿಕೆ ) | ಮಕ್ಕಳನ್ನು ಗುಂಪುಗಳಾಗಿ ಮಾಡಿ, ಪ್ರತಿನಿತ್ಯ ಸೇವಿಸುವ ಆಹಾರ ಪದಾರ್ಥಗಳಾದಧಾನ್ಯಗಳು, ಹಣ್ಣು, ತರಕಾರಿಗಳನ್ನು ಒದಗಿಸುವ ಸಸ್ಯಗಳನ್ನು ಪಟ್ಟಿಮಾಡಲುಶಿಕ್ಷಕರು ಅನುಕೂಲಿಸಿ, ಸಸ್ಯಗಳ ಮೇಲೆ ನಮ್ಮ ಅವಲಂಬನೆಯನ್ನು ತಿಳಿಸುವರು. |
| | | | ii) 'ಹಿತ್ತಲ ಗಿಡ ಮದ್ದು'<br>( ಪರಿಸರ ವೀಕ್ಷಣೆ ) | ಶಿಕ್ಷಕರು, ಶಾಲೆಯ ಸುತ್ತಮುತ್ತ ಲಭ್ಯವಿರುವ ಔಷಧೀಯ ಸಸ್ಯಗಳನ್ನು ಮಕ್ಕಳು ವೀಕ್ಷಿಸಲು ಅನುಕೂಲಿಸಿ, ಅವುಗಳ ಉಪಯೋಗಗಳನ್ನು ತಿಳಿಸಿ, ಅವುಗಳನ್ನು ಶಾಲಾ ಕೈತೋಟದಲ್ಲಿಹಾಗೂ ಮನೆಯ ಹತ್ತಿರ ಬೆಳೆಸುವಂತೆ ಪ್ರೇರೇಪಿಸುವುದು. |
| 4 | ವಿವಿಧ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು | ಅ) ಸುತ್ತಮುತ್ತಲಿನ ಪ್ರಾಣಿಗಳನ್ನು ಗುರುತಿಸುವರು. | **ದಿನ –9**<br>i) 'ಪ್ರಾಣಿಗಳನ್ನು | ವಿವಿಧ ಪ್ರಾಣಿಗಳ ಚಿತ್ರಗಳನ್ನು ಮಕ್ಕಳು ವೀಕ್ಷಿಸಿ, ಅವುಗಳನ್ನು ಗುರುತಿಸಿ ಹೆಸರಿಸುವರು ಹಾಗೂ ತಮ್ಮ ಊರಿನಲ್ಲಿರುವ ಮತ್ತು ತಾವು ನೋಡಿರುವ |

| | | | | |
|---|---|---|---|---|
| | ಗುರುತಿಸಿ, ಪ್ರಾಣಿಗಳನ್ನು ವಾಸಸ್ಥಳದ ಆಧಾರದ ಮೇಲೆ ಹಾಗೂ ಪಕ್ಷಿಗಳನ್ನು ಅವು ಸೇವಿಸುವ ಆಹಾರಕ್ಕನುಗುಣವಾಗಿ ಗುಂಪು ಮಾಡುವರು | | ಗುರುತಿಸೋಣ ಬನ್ನಿ'<br>( ಚಿತ್ರ ವೀಕ್ಷಣೆ ) | ಪ್ರಾಣಿಗಳ ಹೆಸರುಗಳನ್ನು ಪಟ್ಟಿ ಮಾಡುವರು. |
| | | | ii) 'ಪ್ರಾಣಿಗಳ ಕೂಗು'<br>( ಆಡಿಯೋ ಆಲಿಸುವಿಕೆ ) | ಶಿಕ್ಷಕರು ಕೇಳಿಸುತ್ತಿರುವ ವಿವಿಧ ಪ್ರಾಣಿಗಳ ಕೂಗುಗಳ (ಧ್ವನಿ) ಆಡಿಯೋವನ್ನು ಮಕ್ಕಳು ಆಲಿಸಿ ಆ ಪ್ರಾಣಿಗಳನ್ನು ಗುರುತಿಸುವರು. |
| | | ಆ) ಪ್ರಾಣಿಗಳನ್ನು ಅವುಗಳ ವಾಸಸ್ಥಳದ ಆಧಾರದ ಮೇಲೆ ವರ್ಗೀಕರಿಸುವರು. | **ದಿನ – 10**<br>i) ಪ್ರಾಣಿಗಳ ವಾಸಸ್ಥಳಗಳಿರುವ ಚಿತ್ರಪಟಗಳಪ್ರದರ್ಶನ. | ಶಿಕ್ಷಕರು ಪ್ರದರ್ಶಿಸುವ ವಿವಿಧ ಪ್ರಾಣಿಗಳ ವಾಸಸ್ಥಳಗಳಿರುವ ಚಿತ್ರಗಳನ್ನು ಮಕ್ಕಳು ಗುರುತಿಸುವರು. |
| | | | ii) ಪ್ರಾಣಿಗಳ ವರ್ಗೀಕರಣ ಮಾಡೋಣವೇ..!<br>(ಗುಂಪು ಚಟುವಟಿಕೆ) | ಶಿಕ್ಷಕರು,ಪ್ರತಿಯೊಂದು ಮಗುವಿಗೂ ಪ್ರಾಣಿಗಳ ಚಿತ್ರಗಳಿರುವ ಮಿಂಚುಪಟ್ಟಿಗಳನ್ನುನೀಡಿ, ನೆಲವಾಸಿ, ಜಲವಾಸಿ ಮತ್ತು ಹಿಮವಾಸಿಗಳಾಗಿ ಗುಂಪು ಮಾಡಲು ಅನುಕೂಲಿಸುವುದು. |
| | | ಇ) ವಿವಿಧ ಪಕ್ಷಿಗಳನ್ನು ಗುರುತಿಸಿ, ಅವುಗಳನ್ನು ಸಸ್ಯಾಹಾರಿ,ಮಿಶ್ರಾಹಾರಿಗಳಾಗಿ ಗುಂಪು ಮಾಡುವರು. | **ದಿನ – 11**<br>i) ಪಕ್ಷಿ ವೀಕ್ಷಣೆ | ಮಕ್ಕಳು ಶಾಲೆ ಮತ್ತು ಮನೆಯ ಪರಿಸರದಲ್ಲಿರುವ ಪಕ್ಷಿಗಳನ್ನು ವೀಕ್ಷಿಸಿ, ಹೆಸರಿಸುವರು. |
| | | | ii) ಪಕ್ಷಿಗಳ ಆಹಾರವನ್ನು ಬಲ್ಲೆಯಾ!<br>( ವಿಡಿಯೋ ವೀಕ್ಷಣೆ) | ಶಿಕ್ಷಕರು ಪ್ರದರ್ಶಿಸುತ್ತಿರುವ ವಿವಿಧ ಪಕ್ಷಿಗಳ ಆಹಾರಕ್ಕೆ ಸಂಬಂಧಪಟ್ಟ ವಿಡಿಯೋವನ್ನು ಮಕ್ಕಳು ವೀಕ್ಷಿಸಿ, ಸಸ್ಯಾಹಾರಿ, ಮಿಶ್ರಾಹಾರಿ ಪಕ್ಷಿಗಳಾಗಿ ವರ್ಗೀಕರಿಸುವರು. |
| 5 | ದಿಕ್ಕುಗಳು ಮತ್ತು ದಿಕ್ಕುಗಳಿಗನುಗುಣವಾಗಿ ಸ್ಥಳಗಳನ್ನು ಗುರುತಿಸುವರು. | ಅ) ದಿಕ್ಕುಗಳನ್ನು ಗುರುತಿಸುವರು. | **ದಿನ – 12**<br>i) ಆಕಾಶ ವೀಕ್ಷಣೆ | ಮಕ್ಕಳಿಗೆ ಸೂರ್ಯ ಹುಟ್ಟುವ ದಿಕ್ಕನ್ನು ತೋರಿಸಿ, ದಿಕ್ಕುಗಳನ್ನು ಪರಿಚಯಿಸೋಣ. ವಿವಿದ ದಿಕ್ಕುಗಳಿಗೆ ತಿರುಗುವ ಆಟ ಆಡಿಸೋಣ. |
| | | | ii) ನಿಯೋಜಿತ ಚಟುವಟಿಕೆ | ಊರಿನ ಬೇರೆ ಬೇರೆ ಸ್ಥಳಗಳಲ್ಲಿ ನಿಂತು ದಿಕ್ಕುಗಳನ್ನು ಗುರುತಿಸಲು ಸೂಚಿಸಿ. |
| | | ಆ) ವಿವಿಧ ದಿಕ್ಕುಗಳಿಗನುಗುಣವಾಗಿ | **ದಿನ – 13**<br>i) 'ದಿಕ್ಕುಗಳನ್ನು | ಶಿಕ್ಷಕರ ಸೂಚನೆಯಂತೆ ಶಾಲೆಯನ್ನು ಕೇಂದ್ರವಾಗಿಟ್ಟುಕೊಂಡು ಊರಿನ ಪ್ರಮುಖ ಕಟ್ಟಡ ಅಥವಾ ಸ್ಥಳಗಳು ಇರುವ ದಿಕ್ಕನ್ನು |

| | | | | |
|---|---|---|---|---|
| | | ಸ್ಥಳಗಳನ್ನು ಗುರುತಿಸುವರು. | ಗುರುತಿಸೋಣ' | ಗುರುತಿಸುವರು. (ಉದಾ: ಶಾಲೆಯಿಂದ ಆರೋಗ್ಯ ಕೇಂದ್ರವು ಯಾವ ದಿಕ್ಕಿನಲ್ಲಿದೆ?) |
| | | | ii) 'ದಿಕ್ಕು'<br>ಮೌಖಿಕ ಚಟುವಟಿಕೆ | ಮಕ್ಕಳು ತಮ್ಮ ಊರನ್ನು ಕೇಂದ್ರವಾಗಿರಿಸಿಕೊಂಡು ವಿವಿಧ ದಿಕ್ಕುಗಳಲ್ಲಿರುವ ಬೇರೆ ಬೇರೆ ಊರುಗಳನ್ನು ಹೆಸರಿಸುವರು. |
| 6 | ವಿವಿಧ ಆಕಾಶ ಕಾಯಗಳನ್ನು ಗುರುತಿಸುವರು ಹಾಗೂ ಭೂಮಿಯ ಲಕ್ಷಣಗಳ ಬಗ್ಗೆ ಅರಿಯುವರು | ಅ) ಆಕಾಶಕಾಯಗಳನ್ನು ಗುರುತಿಸುವರು | **ದಿನ – 14**<br>i) ಆಕಾಶ ವೀಕ್ಷಣೆ | ಹಗಲು ಮತ್ತು ರಾತ್ರಿ ಆಕಾಶವನ್ನು ವೀಕ್ಷಿಸಿ ಸೂರ್ಯ, ಚಂದ್ರ ಹಾಗೂ ನಕ್ಷತ್ರಗಳನ್ನು ಗುರುತಿಸುವರು. |
| | | | ii) ಚಿತ್ರಕಲೆ | ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಬರೆದು ಬಣ್ಣ ಹಚ್ಚಿ, ತರಗತಿಯಲ್ಲಿ ಪ್ರದರ್ಶಿಸಿ ಸಂಭ್ರಮಿಸುವರು. |
| | | | iii) ಮಾಹಿತಿ ಸಂಗ್ರಹಣೆ | ಹಿರಿಯರಿಂದ ನಕ್ಷತ್ರಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು ತಿಳಿಸುವುದು |
| | | ಆ) ಭೂಮಿಯ ಗುಣಲಕ್ಷಣಗಳನ್ನು ವಿವರಿಸುವರು | **ದಿನ – 15**<br>i) 'ನಮ್ಮ ಭೂಮಿ'<br>(ಪ್ರಾತ್ಯಕ್ಷಿಕೆ) | ಮಕ್ಕಳು, ಭೂಮಿಯ ಮಾದರಿ ( ಗ್ಲೋಬ್ ) ಯನ್ನು ವೀಕ್ಷಿಸಿ, ಭೂಭಾಗ ಮತ್ತು ಜಲಭಾಗವನ್ನು ಗುರುತಿಸಿ, ಶಿಕ್ಷಕರ ಸಹಾಯದಿಂದ ಭೂಮಿಯ ಲಕ್ಷಣಗಳನ್ನು ತಿಳಿಯುವರು. ( ಉದಾ: ಭೂಮಿ ಒಂದು ಗ್ರಹ, ಚಂದ್ರ ಭೂಮಿಯ ಉಪಗ್ರಹ, ಜಲಭಾಗ, ಭೂಭಾಗ ) |
| | | | ii) ಪ್ರಾತ್ಯಕ್ಷಿಕೆ | ಗ್ಲೋಬ್‌ನಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳನ್ನು ಮಕ್ಕಳು ಗುರುತಿಸಲು ಶಿಕ್ಷಕರು ಅನುಕೂಲಿಸುವರು. |
| 7 | ನೀರಿನ ಮೂಲಗಳು, ಉಪಯೋಗಗಳು ಹಾಗೂ ನೀರಿನ ಸಂರಕ್ಷಣೆಯ ಕ್ರಮಗಳ ಬಗ್ಗೆ ತಿಳಿಯುವರು | ಅ) ನೀರಿನ ಮೂಲಗಳನ್ನು ಗುರುತಿಸುವರು | **ದಿನ – 16**<br>i) 'ನೀರಿನ ಮೂಲಗಳು'<br>(ಗುಂಪು ಚಟುವಟಿಕೆ) | ಮಕ್ಕಳು ಗುಂಪುಗಳಲ್ಲಿ ಚರ್ಚಿಸಿ, ನೀರಿನ ಮೂಲಗಳನ್ನು ಪಟ್ಟಿ ಮಾಡುವರು. |
| | | | ii) ನಿಯೋಜಿತ ಕಾರ್ಯ | ನೀರಿನ ಮೂಲಗಳ ಚಿತ್ರಗಳನ್ನು ಸಂಗ್ರಹಿಸಲು ತಿಳಿಸುವುದು |
| | | ಆ) ನೀರಿನ ಉಪಯೋಗಗಳನ್ನು | **ದಿನ – 17** | ದಿನನಿತ್ಯದ ಕಾರ್ಯಗಳಲ್ಲಿ ನೀರನ್ನು ಬಳಸುವ ವಿವಿಧ ಸನ್ನಿವೇಶಗಳ ಬಗ್ಗೆ |

<table>
<tr><td></td><td></td><td>ತಿಳಿಯುವರು</td><td>i) 'ನೀರು ಬೇಕು ನೀರು'<br>(ಚರ್ಚೆ)</td><td>ಮಕ್ಕಳು ಹಾಗೂ ಶಿಕ್ಷಕರು ಚರ್ಚಿಸಿ ನೀರಿನ ಪ್ರಾಮುಖ್ಯತೆಯನ್ನು ಮನಗಾಣುವರು.</td></tr>
<tr><td></td><td></td><td></td><td>ii) ಗೋಡೆ ಪತ್ರಿಕೆ ತಯಾರಿಸುವುದು</td><td>ಮಕ್ಕಳು ನೀರಿನ ಉಪಯೋಗಗಳ ಬಗ್ಗೆ ಗೋಡೆ ಪತ್ರಿಕೆ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಲಿ.</td></tr>
<tr><td></td><td></td><td rowspan="2">ಇ) ನೀರು ಪೋಲಾಗುವುದನ್ನು ತಡೆಯಲು ಅನುಸರಿಸಬಹುದಾದ ಕ್ರಮಗಳನ್ನು ತಿಳಿಯುವರು</td><td>ದಿನ – 18<br>i) ಚಿತ್ರಪಟ / ವಿಡಿಯೋ ಪ್ರದರ್ಶನ</td><td>ಮಕ್ಕಳು, ನೀರು ಪೋಲಾಗುತ್ತಿರುವ ಚಿತ್ರಪಟ / ವಿಡಿಯೋ ವೀಕ್ಷಿಸಿ, ಆ ಸನ್ನಿವೇಶಗಳನ್ನು ಪಟ್ಟಿ ಮಾಡುವರು.</td></tr>
<tr><td></td><td></td><td>ii) ಹಾಡು / ಪಾತ್ರಾಭಿನಯ / ನಾಟಕ ಪ್ರದರ್ಶನ</td><td>ನೀರು ಪೋಲಾಗುವುದನ್ನು ತಡೆಯಲು ಜಾಗೃತಿ ಮೂಡಿಸುವ ಬಗ್ಗೆ ಸೂಕ್ತ ಹಾಡು / ನಾಟಕ / ಪಾತ್ರಾಭಿನಯ ಮಾಡಿಸುವುದು.</td></tr>
<tr><td rowspan="3">8</td><td rowspan="3">ಸಸ್ಯಮೂಲ ಮತ್ತು ಪ್ರಾಣಿಮೂಲ ಆಹಾರ ಪದಾರ್ಥಗಳನ್ನು ಗುರುತಿಸುವರು ಹಾಗೂ ಆಹಾರ ತಯಾರಿಕೆಗೆ ಬೇಕಾಗುವ ಪದಾರ್ಥಗಳನ್ನು ತಿಳಿಯುವರು ಮತ್ತು ವಿವಿಧ ಪ್ರಾಣಿಪಕ್ಷಿಗಳ ಆಹಾರವನ್ನು ತಿಳಿಯುವರು</td><td rowspan="2">ಅ) ಸಸ್ಯಮೂಲ ಮತ್ತು ಪ್ರಾಣಿಮೂಲ ಆಹಾರ ಪದಾರ್ಥಗಳನ್ನು ವರ್ಗೀಕರಿಸುವರು</td><td>ದಿನ – 19<br>i) 'ಆಹಾರ – ಇದು ಎಲ್ಲಿಂದ ದೊರಕುತ್ತದೆ?'<br>(ಗುಂಪು ಚಟುವಟಿಕೆ)</td><td>ವಿವಿಧ ಆಹಾರದ ಚಿತ್ರಗಳ ಮಿಂಚುಪಟ್ಟಿಗಳನ್ನು ಮಕ್ಕಳ ಗುಂಪುಗಳಿಗೆ ನೀಡಿ, ಸಸ್ಯಮೂಲ ಮತ್ತು ಪ್ರಾಣಿಮೂಲ ಆಹಾರದ ಗುಂಪುಗಳಾಗಿ ವಿಂಗಡಿಸಲು ಸೂಚಿಸುವುದು.</td></tr>
<tr><td>ii) ಚಾರ್ಟ್ ತಯಾರಿಕೆ</td><td>ಮಕ್ಕಳು ಸಂಗ್ರಹಿಸಿ ತಂದಿರುವ ಆಹಾರದ ಚಿತ್ರಗಳನ್ನು ಕೆಳಗೆ ನೀಡಿರುವ ಚಾರ್ಟ್ ನಲ್ಲಿ ಅಂಟಿಸುವರು.<table><tr><th>ಸಸ್ಯಮೂಲ</th><th>ಪ್ರಾಣಿಮೂಲ</th></tr><tr><td></td><td></td></tr></table></td></tr>
<tr><td>ಆ) ವಿವಿಧ ಆಹಾರವನ್ನು ತಯಾರಿಸಲು ಬಳಸಿರುವ ಆಹಾರ ಪದಾರ್ಥಗಳನ್ನು</td><td>ದಿನ –20<br>i) 'ಸವಿ ರುಚಿ'<br>(ಗುಂಪು ಚಟುವಟಿಕೆ)</td><td>ತರಗತಿಯ ಮಕ್ಕಳನ್ನು 4-5 ಗುಂಪುಗಳಾಗಿ ಮಾಡಿ, ತಮ್ಮ ಮನೆಯಲ್ಲಿ ತಯಾರಿಸುವ ಕೆಲವು ಆಹಾರ (ಅಡುಗೆ) ಗಳ ಪಟ್ಟಿ ಮಾಡಿ, ಅವುಗಳನ್ನು ತಯಾರಿಸಲು ಬಳಸುವ ಪದಾರ್ಥಗಳನ್ನು ಬರೆಯುವಂತೆ ತಿಳಿಸುವುದು.</td></tr>
</table>

| | | | | |
|---|---|---|---|---|
| | | ತಿಳಿಯುವರು | | ಉದಾ: ಚಪಾತಿ - ಗೋಧಿ, ಮುದ್ದೆ – ರಾಗಿ |
| | | | ii) 'ಹಬ್ಬದೂಟ'<br>(ನಿಯೋಜಿತ ಚಟುವಟಿಕೆ) | ಮಕ್ಕಳು, ತಮ್ಮ ಮನೆಯಲ್ಲಿ ಆಚರಿಸಿದ ಯಾವುದಾದರೊಂದು ಹಬ್ಬದ ದಿನ ತಯಾರಿಸಿದ ವಿವಿಧ ಬಗೆಯ ಅಡುಗೆಗಳು ಹಾಗೂ ಅವುಗಳನ್ನು ತಯಾರಿಸಲು ಬಳಸಿದ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿಕೊಂಡು ಬಂದು ತರಗತಿಯಲ್ಲಿ ಹಂಚಿಕೊಳ್ಳುವರು. |
| | | ಇ) ವಿವಿಧ ಪ್ರಾಣಿ / ಪಕ್ಷಿಗಳು ಸೇವಿಸುವ ಆಹಾರವನ್ನು ಗುರುತಿಸುವರು | **ದಿನ –21**<br>i) 'ಆಹಾರದ ವೈವಿಧ್ಯತೆ'<br>(ಲಿಖಿತ ಚಟುವಟಿಕೆ) | ಶಿಕ್ಷಕರು, ಮಕ್ಕಳಿಂದ ತಾವು ನೋಡಿರುವ ಪ್ರಾಣಿ / ಪಕ್ಷಿಗಳು ಸೇವಿಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿಸಿ, ವಿವಿದ ಪ್ರಾಣಿ / ಪಕ್ಷಿಗಳು ಸೇವಿಸುವ ಆಹಾರದಲ್ಲಿನ ವೈವಿಧ್ಯತೆಯನ್ನು ಅರಿಯಲು ಅನುಕೂಲಿಸಿ. |
| 9 | ಮಾನವನ ಮೂಲಭೂತ ಅಗತ್ಯತೆಗಳ ಅವಶ್ಯಕತೆ ಹಾಗೂ ಕಾಲಕ್ಕನುಗುಣವಾಗಿ ಅವುಗಳಲ್ಲಾದ ಬದಲಾವಣೆಗಳನ್ನು ವಿವರಿಸುವರು | ಅ) ಮೂಲಭೂತ ಅಗತ್ಯಗಳಾದ ಆಹಾರ, ಉಡುಪು, ವಸತಿಯ ಅವಶ್ಯಕತೆಯ ಬಗ್ಗೆ ತಿಳಿಯುವರು | **ದಿನ –22**<br>i) ವಸತಿ, ಆಹಾರ ಮತ್ತು ಉಡುಪುಗಳಿಗೆ ಸಂಬಂಧಿಸಿದ ಪ್ರಶ್ನಾವಳಿ ಕಾರ್ಡ್‌ಗಳು | ಪ್ರತಿಯೊಂದು ಮಗುವಿಗೂ ಪ್ರಶ್ನೆಗಳಿರುವ ಕಾರ್ಡ್ ನೀಡಿ, ಆ ಪ್ರಶ್ನೆಗಳನ್ನು ಓದಿಸಿ ಉತ್ತರ ಹೇಳಿಸುವುದು.<br>ಉದಾ: ನಮಗೆ ಬಟ್ಟೆ ಏಕೆ ಬೇಕು?<br>ನಮಗೆ ಮನೆ ಏಕೆ ಬೇಕು ? ಕಾರ್ಯ ಕಾರಣ ಸಂಬಂಧಗಳನ್ನು ಗುರುತಿಸುವಂತೆ ತಿಳಿಸಿ. |
| | | | ii) ಗುಂಪು ಚಟುವಟಿಕೆ | ವಿವಿಧ ಚಿತ್ರಗಳಿರುವ ಅಭ್ಯಾಸ ಹಾಳೆಗಳನ್ನುಮಕ್ಕಳಿಗೆ ನೀಡಿ, ಅದರಲ್ಲಿ ನಮ್ಮ ಮೂಲಭೂತ ಅವಶ್ಯಕತೆಗಳಿಗೆ ಸಂಬಂಧಿಸಿದ ಚಿತ್ರಗಳಿಗೆ ✓ ಗುರುತು ಹಾಕವಂತೆ ತಿಳಿಸುವುದು.(ಉದಾ:ಉಡುಪು, ಟಿ.ವಿ, ಮಂಚ, ಮನೆ) |
| | | ಆ) ಮಾನವನ ಉಡುಪು ಮತ್ತು ವಸತಿಯ ಅಗತ್ಯತೆಗಳಲ್ಲಾದ | **ದಿನ –23**<br>i) 'ವಸತಿ' | ಮಾನವನಅಂದಿನ ವಸತಿ ( ಗುಹೆ, ಮರದ ಪೊಟರೆ ) ಮತ್ತು ಇಂದಿನವಸತಿಗಳ ಚಿತ್ರಗಳಿರುವಚಿತ್ರಪಟಗಳನ್ನು ವೀಕ್ಷಿಸಿ ಹೋಲಿಸುವರು. |

| | | | | |
|---|---|---|---|---|
| | | ಬದಲಾವಣೆಯ ಬಗ್ಗೆ ತಿಳಿಯುವರು | (ಚಿತ್ರಪಟ ಪ್ರದರ್ಶನ) | |
| | | | ii) 'ಉಡುಪು' (ವಿಡಿಯೋ ವೀಕ್ಷಣೆ) | ಹಿಂದಿನ ಕಾಲದಲ್ಲಿ ಮಾನವರು ಧರಿಸುತ್ತಿದ್ದ ಉಡುಪುಗಳಿಗೆ ಸಂಬಂಧಿಸಿದ ವಿಡಿಯೋ ವೀಕ್ಷಿಸಿ, ಉಡುಪುಗಳನ್ನು ಧರಿಸುವುದರಲ್ಲಾಗಿರುವ ಬದಲಾವಣೆಯ ಬಗ್ಗೆ ತಿಳಿಯುವರು. |
| | | ಇ) ಮಾನವನ ಮುಖ್ಯ ಅವಶ್ಯಕತೆಗಳಲ್ಲೊಂದಾದ ಆಹಾರ, ಆಹಾರ ಪದ್ಧತಿಯಲ್ಲಾದ ಬದಲಾವಣೆ, ಸಂಗ್ರಹಣಾ ವಿಧಾನಗಳ ಬಗ್ಗೆ ತಿಳಿಯುವರು | **ದಿನ –24**<br>i) 'ಆಹಾರ ಪದ್ಧತಿಯಲ್ಲಿ ಬದಲಾವಣೆ' (ಚಿತ್ರಪಟ / ವಿಡಿಯೋ ವೀಕ್ಷಣೆ) | ಆದಿಮಾನವರ ಆಹಾರ ಪದ್ಧತಿಗೆ ಸಂಬಂಧಪಟ್ಟ ಚಿತ್ರಪಟ / ವಿಡಿಯೋ ವೀಕ್ಷಿಸಿ, ಹಿಂದಿನ ಆಹಾರ ಪದ್ಧತಿಯಿಂದ ಇಂದಿನ ಆಹಾರ ಪದ್ಧತಿಗೆ ಆಗಿರುವ ಬದಲಾವಣೆಯ ಬಗ್ಗೆ ತಿಳಿಯುವರು.<br>ಅಂದು ಮತ್ತು ಇಂದು ಸೇವಿಸುತ್ತಿರುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡುವರು. |
| | | | iii) ಚಿತ್ರ ಬಿಡಿಸುವುದು | ಮಕ್ಕಳು, ಧಾನ್ಯ ಸಂಗ್ರಹಿಸುವ ಯಾವುದಾದರೊಂದು ಪರಿಕರದ ಚಿತ್ರ ಬಿಡಿಸಿ, ಬಣ್ಣ ಹಚ್ಚಿ ಆನಂದಿಸುವರು. |
| 10 | ವಿವಿಧ ಸಾರಿಗೆ ವಾಹನಗಳನ್ನು ಗುರುತಿಸಿ ಗುಂಪು ಮಾಡುವರು ಹಾಗೂ ಸಂಪರ್ಕ ಸಾಧನಗಳ ಅಗತ್ಯತೆ ಮತ್ತು ಕಾಲಕ್ಕನುಗುಣವಾಗಿ ಅವುಗಳಲ್ಲಾದ | ಅ) ವಿವಿಧ ಬಗೆಯ ವಾಹನಗಳನ್ನು ಗುರುತಿಸಿ ಹೆಸರಿಸುವರು ಹಾಗೂ ಸಾರಿಗೆ ವಾಹನಗಳನ್ನು ವರ್ಗೀಕರಿಸುವರು | **ದಿನ –25**<br>i) 'ವಾಹನಗಳು' (ಚಿತ್ರಪಟ ಪ್ರದರ್ಶನ) | ಮಕ್ಕಳಿಗೆ, ವಿವಿಧ ಬಗೆಯ ವಾಹನಗಳ ಚಿತ್ರಗಳಿರುವ ಚಿತ್ರಪಟವನ್ನು ನೀಡಿ ಅವುಗಳನ್ನು ಗುರುತಿಸಿ ಹೆಸರಿಸಲು ಅನುಕೂಲಿಸುವುದು. |
| | | | ii) ವಾಹನಗಳ ಚಿತ್ರವೀಕ್ಷಣೆ ಮತ್ತು ವರ್ಗೀಕರಣ | ಮಕ್ಕಳು, ಶಿಕ್ಷಕರು ನೀಡಿರುವ ವಿವಿಧ ವಾಹನಗಳ ಪ್ರತ್ಯೇಕ ಚಿತ್ರಗಳನ್ನು ಭೂಸಾರಿಗೆ, ಜಲಸಾರಿಗೆ ಹಾಗೂ ವಾಯುಸಾರಿಗೆ ವಾಹನಗಳಾಗಿ ವಿಂಗಡಿಸುವರು. |
| | | ಆ) ಸಂಪರ್ಕ ಸಾಧನಗಳು ಮತ್ತು ಅವುಗಳ ಅಗತ್ಯತೆಯನ್ನು | **ದಿನ –26**<br>i) ಗುಂಪು ಚಟುವಟಿಕೆ | ಸಾಧ್ಯವಿರುವ ಪ್ರಮುಖ ಸಂಪರ್ಕ ಸಾಧನಗಳನ್ನು ಮಕ್ಕಳಿಗೆ ತೋರಿಸಿ, ಅವುಗಳನ್ನು ಪರಿಚಯಿಸಿ, ಹೆಸರಿಸಲು ಸಹಕರಿಸುವುದು. |

| | | | | |
|---|---|---|---|---|
| | ಬದಲಾವಣೆಗಳನ್ನು ಅರಿಯುವರು | ಅರಿಯುವರು | ii) ಕ್ಷೇತ್ರಭೇಟಿ | ಮಕ್ಕಳನ್ನು ಹತ್ತಿರದ ಅಂಚೆ ಕಛೇರಿಗೆ ಕರೆದುಕೊಂಡು ಹೋಗಿ ಅಲ್ಲಿನ ಕಾರ್ಯ ವೈಖರಿ ಹಾಗೂ ಅಗತ್ಯತೆಯನ್ನು ತಿಳಿಯಲು ಸಹಕರಿಸುವುದು. |
| | | ಇ) ಹಿಂದಿನ ಸಂಪರ್ಕ ಸಾಧನಗಳಿಂದ ಇಂದಿನ ಸಂಪರ್ಕ ಸಾಧನಗಳವರೆಗೂ ಆಗಿರುವ ಬದಲಾವಣೆಗಳನ್ನು ತಿಳಿಯುವರು | **ದಿನ –27**<br>i) ವಿಡಿಯೋ ಪ್ರದರ್ಶನ | ಹಿಂದಿನ ಹಾಗೂ ಇಂದಿನ ಸಂಪರ್ಕ ಸಾಧನಗಳ ವಿಡಿಯೋ ಪ್ರದರ್ಶಿಸಿ ಅವುಗಳನ್ನು ಪಟ್ಟಿ ಮಾಡಿಸುವುದು. |
| | | | ii) 'ನನ್ನ ನೆಚ್ಚಿನ ಸಂಪರ್ಕ ಸಾಧನ'<br>(ಮೌಖಿಕ ಅಭಿವ್ಯಕ್ತಿ) | ತರಗತಿಯ ಪ್ರತಿಯೊಂದು ಮಗುವು ಯಾವುದಾದರೊಂದು ಸಂಪರ್ಕ ಸಾಧನದ ಉಪಯೋಗಗಳನ್ನು ಹೇಳುವುದು. |
| 11 | ವೈಯಕ್ತಿಕ ಹಾಗೂ ಪರಿಸರ ಸ್ವಚ್ಛತೆ ಬಗ್ಗೆ ಜಾಗೃತಿ ಹೊಂದುವರು ಹಾಗೂ ಕಸದ ಪುನರ್ಬಳಕೆಯ ಬಗ್ಗೆ ತಿಳಿಯುವರು | ಅ) ದೈಹಿಕ ಸ್ವಚ್ಛತೆಯ ಬಗ್ಗೆ ಅರಿಯುವರು | **ದಿನ –28**<br>i) 'ಸ್ವಚ್ಛತೆ'<br>(ಪ್ರಶ್ನಾವಳಿ ಕಾರ್ಡ್) | ಸ್ವಚ್ಛತೆಯ ಬಗ್ಗೆ ಪ್ರಶ್ನೆಗಳಿರುವ ಕಾರ್ಡ್‌ಗಳನ್ನು ಮಕ್ಕಳಿಗೆ ನೀಡಿ ಉತ್ತರಗಳನ್ನು ಹೇಳಿಸಿ, ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವುದು.<br>( ಉದಾ: ಪ್ರತಿದಿನ ಏಕೆ ಸ್ನಾನ ಮಾಡಬೇಕು ? ) |
| | | | ii) ಚಿತ್ರ ಪ್ರದರ್ಶನ ಹಾಗೂ ಚರ್ಚೆ | ತರಗತಿಯ ಮಕ್ಕಳನ್ನು ಐದು ಗುಂಪುಗಳಾಗಿ ಮಾಡಿ, ಪ್ರತಿಯೊಂದು ಗುಂಪಿಗೂ ಒಂದೊಂದು ಜ್ಞಾನೇಂದ್ರಿಯದ ಚಿತ್ರಪಟ ನೀಡಿ ಅವುಗಳ ಸ್ವಚ್ಛತೆಯನ್ನು ಹೇಗೆ ಮಾಡುತ್ತಾರೆ ಎಂಬುದನ್ನು ಕೇಳಿ, ಇನ್ನೂ ಹೆಚ್ಚಿನ ವಿಷಯವನ್ನು ಮಕ್ಕಳಿಗೆ ತಿಳಿಸುವುದು. |
| | | ಆ) ನಮ್ಮ ಸುತ್ತಮುತ್ತಲಿನ ವಿವಿಧ ರೀತಿಯ ಕಸಗಳನ್ನು ಬೇರ್ಪಡಿಸುವರು | **ದಿನ –29**<br>i) 'ಕಸದ ವಿಂಗಡಣೆ'<br>(ಪ್ರಾತ್ಯಕ್ಷಿಕೆ) | ಶಾಲೆಯಲ್ಲಿ ಸಂಗ್ರಹಿಸಿದ ಕಸವನ್ನು ಕೊಳೆಯುವ ಕಸ, ಪುನರ್ಬಳಕೆಯ ಕಸ ಹಾಗೂ ಅಪಾಯಕಾರಿ ಕಸಗಳಾಗಿ ವಿಂಗಡಿಸಿ ತೋರಿಸುವುದು. |
| | | | ii) 'ಕಸದ ವಿಲೇವಾರಿ ಕುರಿತು ಕಿರುಚಿತ್ರ ಪ್ರದರ್ಶನ, | ಮಹಾನಗರ ಪಾಲಿಕೆ/ನಗರಸಭೆ/ಪುರಸಭೆಗಳಲ್ಲಿ ಕಸದ ಸಂಗ್ರಹಣೆ ಮತ್ತು ಕಸದ ವಿಲೇವಾರಿ ಬಗೆಗಿನ ಕಿರುಚಿತ್ರವನ್ನು ತೋರಿಸುವುದು ಹಾಗೂ ಕಸದ ವಿಲೇವಾರಿ ಬಗ್ಗೆ ತಿಳಿಸುವುದು. |

| | | | | |
|---|---|---|---|---|
| | | | | ಮಕ್ಕಳು ತಮ್ಮ ಮನೆಯಲ್ಲಿ ಯಾವ ರೀತಿ ಕಸವನ್ನು ವಿಲೇವಾರಿ ಮಾಡುವರು ಎಂಬುದರ ಬಗ್ಗೆ ಚರ್ಚಿಸುವುದು. |
| | | ಇ) ಪುನರ್ಬಳಕೆಗೆ ಯೋಗ್ಯವಾದ ಕಸದ ಬಗ್ಗೆ ಚರ್ಚಿಸುವರು | **ದಿನ –30**<br>i) ‘Refuse, Reuse, Recycle (3 R’s)<br>(ಗುಂಪು ಚಟುವಟಿಕೆ) | ಮಕ್ಕಳು ಪುನರ್ಬಳಕೆಗೆ ಯೋಗ್ಯವಾದ ಕಸಗಳನ್ನು ಪಟ್ಟಿ ಮಾಡಿ, ಪುನರ್ಬಳಕೆ ವಿಧಾನವನ್ನು ಸಹಪಾಠಿಗಳೊಂದಿಗೆ ಚರ್ಚಿಸಲು ಮಾರ್ಗದರ್ಶಿಸಿ.<br>( ಉದಾ: ಪ್ಲಾಸ್ಟಿಕ್ ವಸ್ತುಗಳು, ಕಾಗದದ ಚೂರುಗಳು ) |
| | | | ii) ಚರ್ಚೆ ಮತ್ತು ಕ್ರಾಫ್ಟ್ ತಯಾರಿಕೆ | ಕಸದ ಪುನರ್ಬಳಕೆಯ ಬಗ್ಗೆ ಚರ್ಚಿಸಿ ಯಾವುದಾದರೊಂದು ಕಸವನ್ನು ಉಪಯೋಗಿಸಿ ಒಂದು ಕ್ರಾಫ್ಟ್ ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸಲು ವ್ಯವಸ್ಥೆಗೊಳಿಸಿ.<br>( ಉದಾ: ಪ್ಲಾಸ್ಟಿಕ್ ಬಾಟಲ್ ನಿಂದ ಹೂವಿನ ಕುಂಡ ಹಾಗೂ ಪೆನ್ ಸ್ಟಾಂಡ್ ಗಳನ್ನು ತಯಾರಿಸುವುದು ) |